Date :10.10.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಜಿ.ಆರ್. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರ–1(ಜಿ)ಇದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಎದುರುದಾರರು ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಾಬ್ತು ಪರಿಹಾರ ಕಡಿಮೆ ಇರುವುದೆಂದು ಹೇಳಿ ನಮ್ಮ ವಕೀಲರ ಮುಖಾಂತರ 1 ನೇ ಎದುರುದಾರರಿಗೆ ಮನವಿ ಪತ್ರ ಸಲ್ಲಿಸಿದ್ದು, ಅದಕ್ಕೆ ಅನುಗುಣವಾಗಿ 1 ನೇ ಎದುರುದಾರರು ದಿಃ 12.09.2023 ರಂದು ಒಂದು ಹಿಂಬರಹವನ್ನು ನಮ್ಮ ವಕೀಲರಿಗೆ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–1 ಎಂದು, ದಿಃ 03.01.2019 ರ ರಾಜ್ಯ ಪತ್ರದಲ್ಲಿ ಕಲಂ–11 ರ ನೋಟೀಸ್ ಪ್ರಕಟಣೆಯಾಗಿದ್ದು ಮತ್ತು ಇನ್ನೊಂದು ರಾಜ್ಯ ಪತ್ರದಲ್ಲಿ ಕಲಂ–19(1) ರ ನೋಟಿಫಿಕೇಶನ್ ಪ್ರಕಟಣೆಯಾಗಿದ್ದು, ಅವುಗಳ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–2 ಮತ್ತು 3 ಎಂದು, ದಿಃ 07.10.2021 ರಂದು 1 ನೇ ಎದುರುದಾರರು ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ, ಅವಾರ್ಡ ತಃಖ್ತೆಯ ದೃಢೀಕೃತ ಪ್ರತಿ ಹಾಗೂ ದಿಃ 21.04.2022 ರ ದಿನಾಂಕದ 2 ಅವಾರ್ಡ ನೋಟೀಸನ್ನು 1 ನೇ ಎದುರುದಾರರು ನನ್ನ ತಂದೆ ಹೆಸರಿಗೆ ನೀಡಿದ್ದು, ಅವುಗಳ ನಕಲು ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–4 ರಿಂದ 7 ಎಂದು, ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಾಬ್ತು 1 ನೇ ಎದುರುದಾರರು ನನ್ನ ತಂದೆಗೆ ಪರಿಹಾರ ನೀಡಿದ್ದು, ಆ ಬಗ್ಗೆ ಇರುವ ಓಚರ್ ಮತ್ತು ಇನ್ನೊಂದು ಓಚರ್ ದೃಢೀಕರಣ ಪತ್ರದೊಂದಿಗೆ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಪಿ–8 ಮತ್ತು 9 ಎಂದು, ಹಿರಿಯೂರು ತಾಲ್ಲೂಕು ಬಗ್ಗನಾಡು ಕಾವಲು ಗ್ರಾಮದ ಜಮೀನಿನ ಬಗ್ಗೆ ದಿಃ 12.12.2018 ರಂದು ಆದ ಒಂದು ನೊಂದಣಿ ಕ್ರಯಪತ್ರ ಆಗಿದ್ದು, ಅದರ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–10 ಎಂದು, ತುಮಕೂರು ಜಿಲ್ಲೆಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪುಟ್ಟಸಾಮಯ್ಯ ಇವರಿಗೆ ನೀಡಿದ ತೆಂಗು, ಅಡಿಕೆ ಮತ್ತು

ಹುಣಸೇ ಮರದ ಸರಾಸರಿ ಹಿಡುವಳಿಯ ದಾಖಲೆಯ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–11 ಎಂದು, ಬೆಂಗಳೂರಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ದಿಃ 18.12.2017 ರಂದು ಹೊರಡಿಸಿದ ಅಧೀಕೃತ ಜ್ಞಾಪನದ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–12 ಎಂದು, ನನ್ನ ಮತ್ತು ನನ್ನ ದೊಡ್ಡಮ್ಮ, ನನ್ನ ತಾಯಿ ಹಾಗೂ ನನ್ನ ಅಣ್ಣನ ಹೆಸರಿಗೆ ಇರುವ ಆಧಾರ್ ಕಾರ್ಡುಗಳ ನೋಟರಿ ಪ್ರತಿ ಹಾಜರುಪಡಿಸಿದ್ದು(ಈ ಹಂತದಲ್ಲಿ ಸಾಕ್ಷಿ ಅವುಗಳ ಮೂಲಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನೋಟರಿ ಪ್ರತಿಯೊಂದಿಗೆ ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಗಿದೆ), ಅವುಗಳನ್ನು ಕ್ರಮವಾಗಿ ನಿಪಿ–13 ರಿಂದ 16 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – 1 ಮತ್ತು 3 ನೇ ಎದುರುದಾರ ಪರ ಶ್ರೀ ಡಿ.ಜಿ.ಪಿ./ವಿಡಿಆರ್ ವಕೀಲರಿಂದ –**

**(ವಕೀಲರುಗಳು ಹಾಜರಿದ್ದು, ಆದರೆ ನ್ಯಾಯಾಲಯದ ಅವಧಿ ಮುಗಿದ ಕಾರಣ, ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.